ಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೩೦ನೇ ಮಾರ್ಚ್ ೧೯೬೦ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.''

೧) ೧೯೬೦ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) ತಿದ್ದುಪಡಿ ವಿಧೇಯಕ

೨) ೧೯೬೦ನೇ ಇಸವಿಯ ಕರ್ನಾಟಕ ಪರಿಹಾರ ಉದ್ದಿಮೆಗಳ (ವಿಶೇಷ ಉಪಬಂಧಗಳು) ವಿಧೇಯಕ

೩) ೧೯೬೦ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ.

೪) ೧೯೬೦ನೇ ಇಸವಿಯ ಮೈಸೂರು ಪಣ ತೆರಿಗೆ (ತಿದ್ದುಪಡಿ) ವಿಧೇಯಕ

೫) ೧೯೬೦ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

೬) ೧೯೬೦ನೇ ಇಸವಿಯ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

೭) ೧೯೬೦ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸುಬುಗಳು, ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕ

೮) ೧೯೬೦ನೇ ಇಸವಿಯ ಕರ್ನಾಟಕ ಭೂಗ ವಸ್ತುಗಳ ಹೋಟೆಲುಂಗಳು ಮತ್ತು ವಸತಿ ಗೃಹಗಳ ತೆರಿಗೆ (ತಿದ್ದುಪಡಿ) ವಿಧೇಯಕ.

೯) ೧೯೬೦ನೇ ಇಸವಿಯ ಕರ್ನಾಟಕ ಕೃಷಿ ಪರಮಾನ ತೆರಿಗೆ (ತಿದ್ದುಪಡಿ) ವಿಧೇಯಕ.

೧೦) ೧೯೬೦ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ

ಪ್ರಕಟಣೆ ೨

ಅಧ್ಯಕ್ಷರು.—ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ,

''ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ ೧೧೪ರ ಮೇರೆಗೆ, ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೩೦ನೇ ಮಾರ್ಚ್, ೧೯೬೦ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

೧) ೧೯೬೦ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕ.

೨) ೧೯೬೦ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕ.

ಕರ್ನಾಟಕ ಬಾಡಿಗೆ ನಿಯಂತ್ರಣ ಜಂಟಿ ಪರಿಶೀಲನಾ ಸಮಿತಿಗೆ ವರದಿ ಸಲ್ಲಿಸಲು ಕಾಲಾವಧಿ ವಿಸ್ತರಣೆ

ಅಧ್ಯಕ್ಷರು.—ಪಟೇಲರೇ, ತಾವು ಪ್ರಸ್ತಾವನ್ನು ಮಂಡಿಸಿರಿ.

ಶ್ರೀ ಜೆ. ಹೆಚ್. ಪಟೇಲ್—ಮಾನ್ಯ ಅಧ್ಯಕ್ಷರೇ, ''೧೯೬೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ವರದಿಯನ್ನು ಒಪ್ಪಿಸಲು ೧೯೬೦ನೇ ಜೂನ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ''.

ಅಧ್ಯಕ್ಷರು.—ಪ್ರಸ್ತಾವನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ

''೧೯೬೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ವರದಿಯನ್ನು ಒಪ್ಪಿಸಲು ೧೯೬೦ನೇ ಜೂನ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕೃತವಾಯಿತು.